

ಪ್ರವೇಶಿಸಿದೆವು. ನಾನು ಚಿಕ್ಕವನಾಗಿದ್ದಾಗ ಇದ್ದ ಆ ಊರಿಗೂ ಈ ಊರಿಗೂ ಬಹಳ ವ್ಯತ್ಯಾಸ ಕಂಡುಬರುತ್ತಿತ್ತು. ಈ ನಂದೀಶ್ವರ ಗುಡಿ ಪ್ರವೇಶಿಸಿದೆವು. ನಾನು ನೆನಪುಗಳಿಗೆ ಮುಖಾಮುಖಿಯಾಗಬೇಕಾಗಿತ್ತು. ಈ ಗುಡಿಯಲ್ಲಿ ಅಮ್ಮ ಹಾಗೂ ಅಕ್ಕ ನನ್ನನ್ನು ಎತ್ತಿಕೊಂಡು ಬಂದು ಪೂಜಾ ಕಾರ್ಯಗಳನ್ನು ಮಾಡಿಸಿಕೊಂಡು ಹೋಗುತ್ತಿದ್ದರು. ನನಗೆ ಈ ನಂದಿಯ ವಿಗ್ರಹವೇ ವಿಸ್ಮಯ. ಶಿವನ ವಾಹನವಾಗಿದ್ದ ಈ ನಂದಿ ನನ್ನ ಹುಟ್ಟಿಗೂ ಕಾರಣವಾಗಿದ್ದ ಎಂದು ಅಮ್ಮ ಹೇಳುತ್ತಿದ್ದಳು.

ನಾವು ನಂದಿಯನ್ನು ಹಾಗೆಯೇ ತದೇಕಚಿತ್ತದಿಂದ ನೋಡಿದೆ. ಅಪ್ಪಣ್ಣಗಳು ಹಾಗೆಯೇ ನೋಡಹತ್ತಿದ್ದರು.

ಜಯವೆಂದು ಆರತಿ ಬೆಳಗಿರೋ
ಹರನೆಂದು ಆರತಿ ಬೆಳಗಿರೋ
ಮಾದಲಾಂಬೆಯ ಗರ್ಭದಲಿದಯಿಸಿದ
ಮೂಜಗಕೆ ಬೆಳಕನು ಕಲ್ಪಿಸಿ
ಬಿಜ್ಜಳನ ಮಂತ್ರಿಯಾದ ಬಸವಯ್ಯಗೆ ಎಂದು ಆರತಿ ಮಾಡಿ ನಮಗೆ ಜ್ಯೋತಿ